"ಮಧುರ ಮಕ್ಕಳೇ - ನಿಮ್ಮ ಬಾಗಿಲಿಗೆ ಯಾರೇ ಬರಲಿ ಅವರಿಗೆ ಸ್ವಲ್ಪವಾದರೂ ಜ್ಞಾನಧನವನ್ನು ನೀಡಬೇಕು, ಮೊದಲು ಅವರಿಂದ ಫಾರ್ಮನ್ನು ತುಂಬಿಸಿ ನಂತರ ಇಬ್ಬರು ತಂದೆಯರ ಪರಿಚಯ ನೀಡಿ"

ಪ್ರಶ್ನೆ: ಜಾದೂಗಾರ ತಂದೆಯ ಜಾದೂಗಾರಿಕೆ ಯಾವುದಾಗಿದೆ?

ಉತ್ತರ: ಜಾದೂಗಾರ ತಂದೆಯ ಜಾದೂಗಾರಿಕೆ ನೋಡಿ - ಇಷ್ಟು ಶ್ರೇಷ್ಠ ತಂದೆಯು ತಿಳಿಸುತ್ತಾರೆ, ನಾನು ನಿಮ್ಮ ಸೇವೆಯಲ್ಲಿ ಬಂದಿದ್ದೇನೆ, ನಾನು ನಿಮ್ಮ ಮಗನು ಆಗಿಬಿಡುತ್ತೇನೆ. ನೀವು ಮಕ್ಕಳು ಯಾವಾಗ ಬಲಿಹಾರಿಯಾಗುತ್ತೀರಿ ಆಗ ನಾನು 21 ಜನ್ಮಗಳಿಗೋಸ್ಕರ ನಿಮಗೆ ಬಲಿಹಾರಿಯಾಗುತ್ತೇನೆ. ಇವು ಸಹ ಅದ್ಭುತವಾದ ಮಾತುಗಳಾಗಿದೆ. ತಂದೆಯು ಎಷ್ಟು ಪ್ರೀತಿಯಿಂದ ನಿಮಗೆ ವಿದ್ಯೆಯನ್ನು ಓದಿಸುತ್ತಾರೆ. ನಿಮ್ಮ ಎಲ್ಲಾ ಮನೋಕಾಮನೆಗಳನ್ನು ಪೂರ್ಣ ಮಾಡುತ್ತಾರೆ, ನಿಮ್ಮಿಂದ ಯಾವುದೇ ಶುಲ್ಕ ಇತ್ಯಾದಿಗಳನ್ನು ಪಡೆಯುವುದಿಲ್ಲ ಅವರಿಗೆ ಹೇಳಲಾಗುತ್ತೆ ರಮಿಸುವ ರಮಣೀಕಗಾರನೆಂದು ಹೇಳಲಾಗುತ್ತದೆ.......

ಗೀತೆ: ಯಾರು ಪ್ರಿಯಕರನ ಜೊತೆಯಿದ್ದಾರೆಯೋ...............

ಓಂ ಶಾಂತಿ. ಪ್ರಿಯಕರ ಮತ್ತು ಮಳೆ. ಯಾರು ಪ್ರಿಯಕರನ ಜೊತೆಯಿದ್ದಾರೆಯೋ ಅವರಿಗಾಗಿಯೇ ಮಳೆಯಾಗಿದೆ. ಯಾವ ಪ್ರಕಾರದ ಮಳೆ ಇದಕ್ಕೆ ಜ್ಞಾನದ ಮಳೆಯೆಂದು ಹೇಳಲಾಗುವುದು. ಜ್ಞಾನದ ಮಳೆಯನ್ನು ಯಾರು ಸುರಿಸುತ್ತಾರೆ? ಜ್ಞಾನಸಾಗರ. ಈ ಗೀತೆಯನ್ನು ಯಾರು ರಚಿಸಿದರೋ ಅಥವಾ ಹಾಡಿದರೋ ಅವರಿಗೆ ಇದು ಏನು ಎಂದು ಗೊತ್ತಿಲ್ಲ. ತಾವು ಭಾಗ್ಯಶಾಲಿ ಜ್ಞಾನ ನಕ್ಷತ್ರಗಳಾಗಿದ್ದೀರಿ. ಜ್ಞಾನಸಾಗರ ತಂದೆಯ ಮಕ್ಕಳಾಗಿದ್ದೀರಿ ಆದ್ದರಿಂದ ನಿಮಗೆ ಜ್ಞಾನ ನಕ್ಷತ್ರಗಳೆಂದು ಕರೆಯಲಾಗುತ್ತದೆ. ತಂದೆಯಿಂದ ಜ್ಞಾನವನ್ನು ಪಡೆಯುತ್ತಿದ್ದೀರಿ. ಜ್ಞಾನಕ್ಕೆ ಯಾವಾಗಲೂ ಗುರಿ - ಉದ್ದೇಶವಿರುತ್ತದೆ ಆದ್ದರಿಂದ ಒಂದಲ್ಲ ಒಂದು ಪ್ರಾಪ್ತಿಯ ಮಾರ್ಗವು ಸಿಗುತ್ತದೆ. ಈಗ ನೀವು ಮಕ್ಕಳು ತಿಳಿದುಕೊಂಡಿದ್ದೀರಿ - ಬೇಹದ್ದಿನ ತಂದೆಯ ಮೂಲಕ ಬೇಹದ್ದಿನ ಆಸ್ತಿಯನ್ನು ಪಡೆಯಬೇಕಾಗಿದೆ. ಅವರು ಪಾರಲೌಕಿಕ ತಂದೆಯಾಗಿದ್ದಾರೆ. ನಿಮ್ಮ ಬಳಿ ಯಾರೇ ಹೊಸ ಜಿಜ್ಞಾಸು ಬರಲಿ ಅವರು ಫಾರ್ಮ್ ತುಂಬಲು ಹೆದರುತ್ತಾರೆ ಆದ್ದರಿಂದ ಅವರಿಗೆ ತಿಳಿಸಬೇಕು - ಏಕೆಂದರೆ ನಿಮ್ಮ ಬಳಿ ಬಂದಿರುವ ಕಾರಣ ಪಾಪ ಅವರಿಗೂ ಸ್ವಲ್ಪವಾದರೂ ಒಂದಲ್ಲಾ ಒಂದು ಪ್ರಾಪ್ತಿಯಾಗಬೇಕು. ಬಹಳ ಬಡವರಾಗಿದ್ದಾರೆ. ನಮ್ಮ ಬಳಿಯಂತೂ ಅಧಿಕಾರವಿದೆ, ಕೆಲವರು ನಂಬರ್ವಾರ್ ಪೂರ್ಣ ಉತ್ತೀರ್ಣರಾಗುತ್ತಾರೆ, ಕೆಲವರು ಕಡಿಮೆ. ನಮ್ಮ ಬಳಿ ಅಪಾರವಾದ ಜ್ಞಾನರತ್ನಗಳಿವೆ. ಎಂಬ ನಶೆಯಿದೆ. ಜ್ಞಾನಸಾಗರ ಯಾವುದೆ ಮಹಲಿನಲ್ಲಂತೂ ಇರುವುದಿಲ್ಲ, ಕುಟೀರದಲ್ಲಿರುತ್ತಾರೆ. ಕುಟೀರದಲ್ಲಿರಲು ಇಷ್ಟ ಪಡುತ್ತಾರೆ. ಯಾರಾದರು ನಾವು ಫಾರ್ಮನ್ನು ತುಂಬುವುದಿಲ್ಲವೆಂದು ಹೇಳಿದರೆ ಅವರಿಗೆ ತಿಳಿಸಿ - ತಮ್ಮ ಹೆಸರನ್ನಾದರು ಬರೆಯಿರಿ. ಇಂತಹವರು ಬಂದಿದ್ದರೆಂದು ನಮ್ಮ ಹಿರಿಯ ಸಹೋದರಿಯವರಿಗೆ ತೋರಿಸುತ್ತೇವೆ. ಏನನ್ನಾದರೂ ತಿಳಿದುಕೊಳ್ಳುವುದಕ್ಕೋಸ್ಕರವೇ ಬಂದಿದ್ದೀರಿ ಅಂದಮೇಲೆ ತಮ್ಮ ಹೆಸರನ್ನು ಬರೆಯಿರಿ. ಲೌಕಿಕ ತಂದೆಯ ಹೆಸರನ್ನೂ ಬರೆಸಿಕೊಳ್ಳಬೇಕು ನಂತರ ತಿಳಿಸಬೇಕು - ಇಬ್ಬರು ತಂದೆಯರಂತೂ ಇದ್ದಾರೆ ಒಬ್ಬರು ಲೌಕಿಕ ತಂದೆ, ಇನ್ನೊಬ್ಬರು ಪಾರಲೌಕಿಕ ಪರಮಪಿತ ಪರಮಾತ್ಮನಾಗಿದ್ದಾರೆ. ಯಾವಾಗ ಪಿತಾ ಎಂದು ಹೇಳುತ್ತೀರೆಂದರೆ ಅವರ ಹೆಸರನ್ನು ಬರೆಯಿರಿ. ಪರಮಪಿತ ಎಂದು ಹೇಳುತ್ತೀರಿ ಅಂದಮೇಲೆ ಅವರು ಎಲ್ಲರ ತಂದೆಯಾಗಿದ್ದಾರೆ. ಪ್ರತಿಯೊಬ್ಬರಿಗೆ ಲೌಕಿಕ ಮತ್ತು ಪಾರಲೌಕಿಕ ತಂದೆಯಿರುತ್ತಾರೆ. ಭಕ್ತಿ ಮಾರ್ಗದಲ್ಲಿ ಇಬ್ಬರು ತಂದೆಯಿರುತ್ತಾರೆ. ಸತ್ಯಯುಗ, ತ್ರೇತಾದಲ್ಲಿ ಲೌಕಿಕ ತಂದೆಯಂತೂ ಇರುತ್ತಾರೆ ಆದರೆ ಪಾರಲೌಕಿಕ ತಂದೆಯ ಹೆಸರನ್ನೂ ಸಹ ತೆಗೆದುಕೊಳ್ಳುವುದಿಲ್ಲ ಈ ಮಾತುಗಳನ್ನು ನೀವು ಮಕ್ಕಳು ತಿಳಿದುಕೊಂಡು ಅನ್ಯರಿಗೆ ತಿಳಿಸಬೇಕಾಗಿದೆ. ಎಷ್ಟು ಸಹಜವಾದ ಮಾತುಗಳನ್ನು ತಿಳಿಸಿಕೊಡಲಾಗುತ್ತದೆ. ಯಾರಿಗೆ ಪರಮಪಿತ ಪರಮಾತ್ಮನೆಂದು ಹೇಳಲಾಗುತ್ತದೆಯೋ ಅವರು ಪರಲೋಕದಲ್ಲಿರುವವರಾಗಿದ್ದಾರೆ. ಬುದ್ಧಿಯಲ್ಲಿ ಬರುತ್ತದೆ - ಅವಶ್ಯವಾಗಿ ಸತ್ಯಯುಗ ತ್ರೇತಾದಲ್ಲಿ, ಪಾರಲೌಕಿಕ ತಂದೆಯನ್ನು ನೆನಪು ಮಾಡುವುದಿಲ್ಲ ಇಲ್ಲಂತೂ ಎಲ್ಲರೂ ನೆನಪು ಮಾಡುತ್ತಾರೆ. ಆದ್ದರಿಂದ ತಿಳಿಸಬೇಕು - ಲೌಕಿಕ ತಂದೆಯ ಹೆಸರನ್ನು ಬರೆದಿದ್ದೀರಿ, ಈಗ ಪಾರಲೌಕಿಕ ತಂದೆಯ ಹೆಸರನ್ನು ಬರೆಯಿರಿ. ಎಲ್ಲಾ ಜೀವಾತ್ಮಗಳು ಈ ಪಾರಲೌಕಿಕ ಪರಮಪಿತನನ್ನೇ ನೆನಪು ಮಾಡುತ್ತಾರೆ. ಅವರು ಒಬ್ಬರೇ ಆಗಿದ್ದಾರೆ. ಹೇಗೆ ಆತ್ಮ ನಿರಕಾರಿಯಾಗಿದೆಯೋ ಹಾಗೆಯೇ ಅವರೂ ನಿರಕಾರನಾಗಿದ್ದಾರೆ. ಅವರಿಗೆ ಯಾವುದೇ ಸ್ಥೂಲ, ಸೂಕ್ಷ್ಮ ಶರೀರವಿಲ್ಲ. ಅವರನ್ನು ಸರ್ವವ್ಯಾಪಿ ಎಂದು ಹೇಳಲು ಸಾಧ್ಯವಿಲ್ಲ.ಲೌಕಿಕ ತಂದೆಯನ್ನು ಎಂದೂ ಸರ್ವವ್ಯಾಪಿ ಎಂದು ಹೇಳಲಾಗುವುದಿಲ್ಲ. ಸರ್ವವ್ಯಾಪಿ ಎಂದು ಹೇಳಿದರೆ ಆಸ್ತಿಯು ಸಿಗುತ್ತದೆಯೇ? ಅಂದಮೇಲೆ ಪಾರಲೌಕಿಕ ತಂದೆಯನ್ನು ಸರ್ವವ್ಯಾಪಿ ಎಂದು ಏಕೆ ಹೇಳುತ್ತೀರಿ? ಪಾರಲೌಕಿಕ ತಂದೆಯನ್ನು ಎಲ್ಲರೂ ಇಷ್ಟೊಂದು ನೆನಪು ಮಾಡುತ್ತೀರೆ ಅಂದ ಮೇಲೆ ಅವರಿಂದ ಅವಶ್ಯವಾಗಿ ಆಸ್ತಿಯು ಸಿಗಬೇಕು. ರಚನೆಗೆ ರಚಯಿತನಿಂದ ಆಸ್ತಿಯಂತೂ ಬೇಕಲ್ಲವೆ. ಹೀಗೆ ಹೊಸ-ಹೊಸ ಮಾತುಗಳನ್ನು ತಿಳಿಸಿದಾಗ ಬೇಗ ತಿಳಿದುಕೊಳ್ಳುತ್ತಾರೆ. ನೀವು ಅನುಭವದಿಂದ ತಿಳಿಸುತ್ತೀರಿ. ಆ ತಂದೆಯಿಂದ ಆಸ್ತಿಯನ್ನು ಪಡೆಯುವ ಯುಕ್ತಿಗಳನ್ನು ತಿಳಿಸಲಾಗುತ್ತದೆ. ಆ ತಂದೆಯು ಸ್ವರ್ಗದ

ರಚಯಿತನಾಗಿದ್ದಾರೆ. ನಿಮಗೆ ಗೊತ್ತಿದೆ - ಭಾರತವು ಜೀವನ್ಮುಕ್ತವಾಗಿತ್ತು ಈಗ ಜೀವನಬಂಧನವಾಗಿದೆ. ದುಃಖದಿಂದ ಮುಕ್ತರನ್ನಾಗಿ ಮಾಡವವರು ತಂದೆಯೇ ಆಗಿದ್ದಾರೆ.

ಈ ತ್ರಿಮೂರ್ತಿ ಸಹಿತ ಲಕ್ಷ್ಮಿ-ನಾರಾಯಣರ ಚಿತ್ರವು ಬಹಳ ಚೆನ್ನಾಗಿದೆ. ಇದು ಪ್ರತಿಯೊಬ್ಬರ ಬಳಿ ಇರಬೇಕು. ಇದರ ಬಗ್ಗೆ ತಿಳಿಸಿ - ಅವಶ್ಯವಾಗಿ ಈ ಲಕ್ಷ್ಮಿ - ನಾರಾಯಣರು ಭಾರತದ ಆದಿಸನಾತನ ದೇವಿ-ದೇವತೆಗಳಾಗಿದ್ದರು, ಸತ್ಯಯುಗದ ಮಾಲೀಕರಾಗಿದ್ದರು. ಸ್ವರ್ಗದ ಆಸ್ತಿಯನ್ನು ಅವಶ್ಯವಾಗಿ ಪಾರಲೌಕಿಕ ತಂದೆ ಸ್ವರ್ಗದ ರಚಯಿತನೇ ಕೊಡಲು ಸಾಧ್ಯ. ಯಾರಾದರು ಫಾರ್ಮನ್ನು ತುಂಬಿಸದಿದ್ದರೂ ಸಹ ಈ ಮಾತನ್ನು ಬರೆಸುವುದು ಸಹಜವಾಗಿದೆ - ಇಬ್ಬರು ತಂದೆಯರಿದ್ದಾರೆ - ಇಬ್ಬರಿಂದಲೂ ಆಸ್ತಿಯು ಸಿಗುತ್ತದೆ. ಲಕ್ಷ್ಮಿ-ನಾರಾಯಣ ಅಥವಾ ಅವರ ಮಕ್ಕಳು ಮುಂತಾದವರ ಜೀವನದ ಕಥೆಯಂತೂ ಇಲ್ಲ. ಕೃಷ್ಣನನ್ನು ಬುಟ್ಟಿಯಲ್ಲಿ ತೆಗೆದುಕೊಂಡು ಹೋದರು, ಈ ರೀತಿ ಆಯಿತು ಎಂದು ಕೃಷ್ಣನಿಗೋಸ್ಕರ ಹೇಳುತ್ತಾರೆ. ಒಳ್ಳೆಯದು ಈ ಲಕ್ಷ್ಮಿ-ನಾರಾಯಣರಿಗೆ ರಾಜ್ಯ ಎಲ್ಲಿಂದ ಸಿಕ್ಕಿತು? ಅವಶ್ಯವಾಗಿ ಆದಿಸನಾತನ ದೇವಿ-ದೇವತೆಗಳ ರಾಜ್ಯವಿತ್ತು, ಅದರಲ್ಲಿ ಮೊದಲನೇ ನಂಬರಿನವರು ಲಕ್ಷ್ಮಿ-ನಾರಾಯಣರಾಗಿದ್ದಾರೆ. ಅವರಿಗೆ ಈ ಸ್ವರ್ಗದ ಆಸ್ತಿಯನ್ನು ಯಾರು ಕೊಟ್ಟರು? ಈ ಪ್ರಜಾಪಿತ ಬ್ರಹ್ಮಾರವರು ಕುಳಿತಿದ್ದಾರೆ, ಈ ಆಸ್ತಿಯಾದ ಲಕ್ಷ್ಮಿ-ನಾರಾಯಣರು ಸಮ್ಮುಖದಲ್ಲಿ ನಿಂತಿದ್ದಾರೆ. ನಂತರ ವೃಕ್ಷದ ಚಿತ್ರದ ಬಳಿ ಕರೆ ತನ್ನಿ- ಇಲ್ಲಿ ರಾಜಯೋಗದ ತಪಸ್ಸು ಮಾಡುತ್ತಿದ್ದಾರೆ ಇದರಿಂದ ಅವರು ಲಕ್ಷ್ಮಿ-ನಾರಾಯಣರಾಗುತ್ತಾರೆ. ಇದನ್ನು ತಿಳಿಸುವುದು ಎಷ್ಟು ಸಹಜವಾಗಿದೆ. ಲಕ್ಷ್ಮಿ-ನಾರಾಯಣರ ಭಕ್ತರಿಗೆ ತಿಳಿಸುವುದು ಬಹಳ ಸಹಜವಾಗಿದೆ. ಈಗ ಒಳಗಡೆ ಯಾರೇ ಬರುತ್ತಾರೆಂದರೆ ಅವರಿಗೆ ಒಂದಲ್ಲ ಒಂದು ಶಿಕ್ಷಣವನ್ನು ಅವಶ್ಯವಾಗಿ ಕೊಡಬೇಕಾಗುತ್ತದೆ. ನಿಮ್ಮ ಮುಖಾಂತರ ಈ ವೇಶ್ಯಯರು, ಬೇಡರು ಮುಂತಾದವರ ಉದ್ಧಾರವು ಆಗಬೇಕಾಗಿದೆ ಆದರೆ ನಿಮ್ಮಲ್ಲಿ ಇನ್ನೂ ಆ ಶಕ್ತಿ ಬಂದಿಲ್ಲ. ತಂದೆಯು ತಿಳಿಸುತ್ತಾರೆ - ನೀವು ತಮ್ಮ ಪತಿಗೂ ಜ್ಞಾನದ ಭೂಂ,ಭೂಂ ಮಾಡುತ್ತಾ ಇರಿ. ಸ್ತ್ರೀಯೂ ತನ್ನ ಪತಿಯನ್ನು ಸಹ ಕೇಳಬಹುದು - ನೀವು ತಮ್ಮ ಲೌಕಿಕ ತಂದೆಯ ಹೆಸರನ್ನು ತಿಳಿಸಿ. ಒಳ್ಳೆಯದು ಪಾರಲೌಕಿಕ ತಂದೆಯ ಹೆಸರನ್ನು ತಿಳಿಸಿ? ಯಾರನ್ನು ನೀವು ಪದೇ-ಪದೇ ಜನ್ಮ-ಜನ್ಮದಲ್ಲೂ ನೆನಪು ಮಾಡುತ್ತೀರಿ ಖಂಡಿತ ಅವರಿಂದ ಸ್ವಲ್ಪ ಹೆಚ್ಚಾಗಿ ಆಸ್ತಿ ಸಿಗುತ್ತದೆ. ಲಕ್ಷ್ಮಿ-ನಾರಾಯಣರನ್ನು ನೆನಪು ಮಾಡುವುದರಿಂದತೂ ಏನೂ ಸಿಗುವುದಿಲ್ಲ.

ತಂದೆಯು ಬಂದು ನಿಮ್ಮ ಎಷ್ಟೊಂದು ಸೇವೆ ಮಾಡುತ್ತಾರೆ. ನೀವು ಬಯಸದೆಯೇ ನಿಮಗೆ ಓದಿಸುತ್ತಾರೆ, ಹೇಳುತ್ತಾರೆ - ಬನ್ನಿ, ನಿಮ್ಮನ್ನು ಸ್ವರ್ಗಕ್ಕೆ ಕರೆದುಕೊಂಡು ಹೋಗುತ್ತೇನೆ, ಎಲ್ಲರ ಮನೋಕಾಮನೆಗಳನ್ನು ಪೂರ್ಣ ಮಾಡುತ್ತಾರೆ. ನರ-ನಾರಾಯಣರ ಚಿತ್ರವೂ ಇದೆಯಲ್ಲವೇ. ಲಕ್ಷ್ಮಿಯ ಪೂಜೆಯಾಗುತ್ತದೆ, ಲಕ್ಷ್ಮಿಯಿಂದ ಸಂಪತ್ತು ಸಿಗುತ್ತದೆ ಎಂದು ತಿಳಿಯುತ್ತಾರೆ. ಇವೆಲ್ಲವೂ ಭಕ್ತಿಮಾರ್ಗದ ಮಾತುಗಳಾಗಿವೆ. ಲಕ್ಷ್ಮಿ(ಸ್ತ್ರೀ) ಹಣವನ್ನು ಎಲ್ಲಿಂದ ತರುತ್ತಾರೆ? ಅವರಿಗೆ ಖಂಡಿತ ವಾಗಿ ಪತಿಯಿಂದಲೇ ಸಿಗುತ್ತದೆ. ಪೂಜಾರಿಗಳು ಇದೆಲ್ಲವನ್ನು ತಿಳಿದುಕೊಂಡಿಲ್ಲ. ಇದನ್ನು ನೀವು ಮಕ್ಕಳು ತಿಳಿಸಬೇಕು. ನೀವು ಸಹ ಈಗ ತಿಳಿದುಕೊಳ್ಳುತ್ತೀರಿ - ಹಿಂದೆ ನಾವು ಏನು ಮಾಡುತ್ತಿದ್ದೆವು? ಏನನ್ನೂ ತಿಳಿದುಕೊಂಡಿರಲಿಲ್ಲ ಈಗ ಎಲ್ಲವನ್ನೂ ಚೆನ್ನಾಗಿ ತಿಳಿದುಕೊಂಡಿರುವಿರಿ. ಕೃಷ್ಣಜನ್ಮಷ್ಠಮಿಯಂದು ಮುಂಜಾನೆ ಕೃಷ್ಣನಿಗೆ ಹಾಲು ಕುಡಿಸುತ್ತಾರೆ, ಉಯ್ಯಲೆಯಲ್ಲಿ ತೂಗುತ್ತಾರೆ ಮತ್ತು ರಾತ್ರಿ ಪಾಯಸವನ್ನು ಕುಡಿಸುತ್ತಾರೆ. ಏನು ಇಷ್ಟು ಸಮಯದಲ್ಲಿಯೇ ಪುರಿ ಪಾಯಸವನ್ನು ತಿನ್ನಿಸುತ್ತಾರೆ. ಏನು ಅಷ್ಟರಲ್ಲಿ ಪೂರಿ-ಪಾಯಸ ತಿನ್ನುವಷ್ಟು ದೊಡ್ಡವನಾಗಿಬಿಟ್ಟನೆ ! ಇವೂ ಸಹ ತಿಳಿದುಕೊಳ್ಳುವ ಮಾತುಗಳಾಗಿವೆಯಲ್ಲವೇ. ನಿಮಗೆ ಗೊತ್ತಿದೆ ಈ ರಾಧೆ-ಕೃಷ್ಣರೇ ನಂತರ ಲಕ್ಷ್ಮಿ-ನಾರಾಯಣರಾಗುತ್ತಾರೆ. ಶಿವತಂದೆಯು ಇವರಿಗೆ ಈ ಪದವಿಯನ್ನು ಕೊಡಿಸುತ್ತಾರೆ. ಶಿವನಿಗೆ ಎಂದು ಪೂರಿ ಪಾಯಸವನ್ನು ತಿನ್ನಿಸುವುದಿಲ್ಲ. ಕೇವಲ ಅವರಮೇಲೆ ಹಾಲನ್ನೆರೆಯುತ್ತಾರೆ. ಶಿವತಂದೆಯಂತು ನಿರಾಕಾರನಾಗಿದ್ದಾರೆ, ಅವರಿಗೆ ಯಾವುದೇ ನಾಮರೂಪವಿಲ್ಲ ಅಂದಮೇಲೆ ಅವರ ಮೇಲೆ ಹಾಲು ಇತ್ಯಾದಿಗಳನ್ನೆರೆಯುವ ಅರ್ಥವೇನು? ಅವರಿಗೆ ಏನನ್ನೂ ತಿನ್ನಿಸುವುದಿಲ್ಲ ನಿರಾಕಾರನಲ್ಲವೇ. ಕೃಷ್ಣನಿಗೆ ರೊಟ್ಟಿ ಮುಂತಾದುವನ್ನು ತಿನ್ನಲು ಬಾಯಿದೆ. ಶಿವನ ಮೇಲೆ ಏನೂ ಎರೆಯುವುದಿಲ್ಲ. ಶಂಕರನಿಗೆಯೆಡುತ್ತಾರೆ ಶಿವನಿಗಲ್ಲ. ಶಂಕರನಿಗಾದರು ಆಕಾರಿ ರೂಪವಿದೆ ಇಬ್ಬರೂ ಒಂದಾಗಲು ಸಾಧ್ಯವಿಲ್ಲ. ಈಗ ಬಾಬಾ ಎಷ್ಟೊಂದು ಜ್ಞಾನವನ್ನು ತಿಳಿಸುತ್ತಾರೆ, ಇದು ಎಷ್ಟೊಂದು ಗುಪ್ತ ಮಾತಾಗಿದೆ.

ನೀವು ಶಿವಬಾಬಾರವರ ಗೋಪಿಕೆಯರಾಗಿದ್ದೀರಿ. ಶಿವನಿಗೆ ಬಾಲಕನೆಂದೂ ಹೇಳುತ್ತಾರೆ. ಇದನ್ನೂ ಸಹ ಶಿವತಂದೆಯು ಕೇಳುತ್ತಾರೆ - ನೀವು ಶಿವನನ್ನು ಮಗನನ್ನಾಗಿ ಏಕೆ ಮಾಡಿಕೊಂಡಿದ್ದೀರ? ಆಸ್ತಿಯನ್ನು ಮಗನಿಗೆ ಕೊಡಲಾಗುತ್ತದೆ. ಮೊದಲು ನೀವು ಯಾವಾಗ ಬಲಿಹಾರಿಯಾಗುತ್ತೀರಿ ಆಗಲೇ ಶಿವಬಾಬಾ ನಿಮಗೆ ಬಲಿಹಾರಿಯಾಗುತ್ತಾರೆ. ತಂದೆಯು ಮಕ್ಕಳಮೇಲೆ ಬಲಿಹಾರಿಯಾಗುತ್ತಾರೆ ಎಂಬುದು ಇದೆ. ಆದರೆ ತಂದೆಯು ತಿಳಿಸುತ್ತಾರೆ-ಮೊದಲು ನೀವು ಬಲಿಹಾರಿಯಾಗಬೇಕು, ಆಗ ನಾನು ಬಲಿಹಾರಿಯಾಗುತ್ತೇನೆ. ಬಲಿಹಾರಿಯಾಗುವುದು ಎಂದರೆ ಅವರನ್ನು ತಮ್ಮ ಮಗನನ್ನಾಗಿ ಮಾಡಿಕೊಳ್ಳುವುದು, ಅವರ ಪಾಲನೆಯನ್ನು ಮಾಡುವುದು. ಎಷ್ಟು ಅದ್ಭುತ ಮಾತುಗಳಾಗಿದೆ. ಮಾತೆಯರಲ್ಲವೆ. ಪುರುಷರು ಸಹ ಶಿವನನ್ನು ಮಗನಾಗಿ ತಮ್ಮ ವಾರಸುಧಾರನನ್ನಾಗಿ ಮಾಡಿಕೊಳ್ಳುತ್ತಾರೆ. ಶಿವಬಾಬಾರವರನ್ನು ಜಾದೂಗಾರನೆಂದೂ ಹೇಳುತ್ತಾರಲ್ಲವೆ. ಲಕ್ಷ್ಮಿ-ನಾರಾಯಣರು ಜಾದೂಗಾರರಲ್ಲ. ಇವು ಬಹಳ ಗುಪ್ತ ಮಾತುಗಳಾಗಿವೆ. ಇದನ್ನು ವಿರಳವಾಗಿ ಕೆಲವರೇ

ಅರಿತುಕೊಳ್ಳುತ್ತಾರೆ.ಅಪರೋಕ್ಷವಾಗಿಯೂ ತಿಳಿಸುತ್ತಾರೆ. ನೀವು ಮಕ್ಕಳು ಅನುಭವಿಗಳಾಗಿದ್ದೀರಿ ಬಾಬಾರವರು ಸಾಕ್ಷತ್ಕಾರವನ್ನು ಮಾಡಿದ್ದರು ಆದರೆ ಮಮ್ಮಾ ಯಾವುದೇ ಸಾಕ್ಷತ್ಕಾರವನ್ನು ಮಾಡಿರಲಿಲ್ಲ ಆದರೂ ಸಹ ಮಮ್ಮಾ ಎಲ್ಲರಿಗಿಂತ ಮುಂದೆ ತೀವ್ರಗತಿಯಲ್ಲಿ ಹೋದರು. ಎಲ್ಲರಿಗೂ ಸಾಕ್ಷತ್ಕಾರ ವಂತೂ ಆಗುವುದಿಲ್ಲ. ಹಾಗೆ ನೋಡಿದರೆ ಹಿಂದೆ ಯಾರಿಗೆ ಸಾಕ್ಷತ್ಕಾರಗಳಾಗಿದೆಯೋ ಅವರು ಇಂದು ಇಲ್ಲ. ಸಾಕ್ಷತ್ಕಾರದೊಂದಿಗೆ ಯಾವುದೇ ಸಂಬಂಧವಿಲ್ಲ ಇವಂತು ಧಾರಣೆ ಮಾಡುವ ಮತ್ತು ಮಾಡಿಸುವ ಮಧುರ ಮಾತುಗಳಾಗಿವೆ. ರಮಿಸುವ ರಮಣೀಕ ಜಾದೂಗಾರ್ ತಂದೆಯಾಗಿದ್ದಾರಲ್ಲವೆ. ಜಾದೂಗಾರರು ಬಹಳ ತೀವ್ರಗತಿಯಲ್ಲಿರುತ್ತಾರೆ. ತಲೆಯನ್ನು ಕತ್ತರಿಸಿ ಮತ್ತೆ ಜೋಡಿಸುತ್ತಾರೆ. ಹಿಂದೆ ಬಹಳ ಚಮತ್ಕಾರಗಳನ್ನು ತೋರಿಸುತ್ತಿದ್ದರು.

ಈಗ ನೀವು ಮಕ್ಕಳು ತಿಳಿದುಕೊಂಡಿದ್ದೀರಿ - ತಂದೆಯದೇ ಮಹಿಮೆಯನ್ನೇ ಮಾಡಲಾಗುತ್ತದೆ. ನಿಮ್ಮ ಲೀಲೆ ಅಪರಮ್ಪಾರವಾಗಿದೆ, ನಿಮ್ಮ ಗತಿ-ಮತವು ಭಿನ್ನವಾಗಿದೆ ಎಂದು ಗಾಯನ ಮಾಡುತ್ತಾರೆ. ಶ್ರೀಮತದಿಂದ ನಿಮ್ಮನ್ನು ಶ್ರೇಷ್ಠ ದೇವತೆಗಳನ್ನಾಗಿ ಮಾಡುತ್ತಿದ್ದಾರೆ. ಶ್ರೀ ಶ್ರೀ ಎಂದು ನಿರಾಕಾರ ಶಿವತಂದೆಗೆ ಹೇಳಲಾಗುತ್ತದೆ. ಲಕ್ಷ್ಮಿ-ನಾರಯಣರನ್ನು ಇಷ್ಟು ಶ್ರೇಷ್ಠರನ್ನಾಗಿ ಯಾರು ಮಾಡಿದರು? ಅವಶ್ಯವಾಗಿ ಅವರಿಗಿಂತ ಶ್ರೇಷ್ಠಾತಿ ಶ್ರೇಷ್ಠರಿರಬೇಕು. ತಂದೆಯಿಂದ ನಾವು ಮನುಷ್ಯರನ್ನು ದೇವತೆಗಳನ್ನಾಗಿ ಹೇಗೆ ಮಾಡುವುದು ಎಂಬ ವಿದ್ಯೆಯನ್ನು ಕಲಿಯುತ್ತೇವೆ. ಈಗ ನೀವೆಲ್ಲಾ ಸೀತೆಯರು ರಾವಣನ ಜೈಲಿನಲ್ಲಿ, ಶೋಕವಾಟಿಕೆಯಲ್ಲಿ ದುಃಖವನ್ನುಅನುಭವಿಸುತ್ತಿದ್ದೀರಿ. ರಾಮ ರಾಜ್ಯದಲ್ಲಿ ಎಂದೂ ಶೋಕವಿರುವುದೇಯಿಲ್ಲ. ಅಂದಮೇಲೆ ಯಾರಿಂದಅಸ್ತಿಯು ಸಿಗುತ್ತದೆಯೋ ಅವರನ್ನು ನೆನಪು ಮಾಡಬೇಕಲ್ಲವೆ. ನಾವಾತ್ಮಗಳಾಗಿದ್ದೇವೆ ಎಂಬುದನ್ನೂ ಒಪ್ಪುತ್ತಾರೆ. ಅಂದಮೇಲೆ ಕೇಳಿ-ನಿಮ್ಮ ಲೌಕಿಕ ತಂದೆಯ ಹೆಸರೇನು? ಪಾರಲೌಕಿಕ ತಂದೆಯ ಹೆಸರೇನು? ತಂದೆಯನ್ನು ಸರ್ವವ್ಯಾಪಿ ಎಂದಂತೂ ಹೇಳುವುದಿಲ್ಲ. ತಂದೆಯೆಂದದರೇನೇ ಆಸ್ತಿಯಾಗಿದೆ ಬೇಹದ್ದಿನ ತಂದೆಯಿಂದ ಬೇಹದ್ದಿನ ಆಸ್ತಿಯು ಸಿಗುತ್ತದೆ. ಈಗ ರಾವಣನು ಅದನ್ನು ಕಸಿದುಕೊಂಡಿದ್ದಾನೆ ಆದ್ದರಿಂದ ಮಾಯಾಜೀತರೇ ಜಗಜ್ಜೀತರೆಂದು ಹೇಳಲಾಗುತ್ತದೆ. ಮಾಯೆಯ ಮೇಲೆ ಜಯಗಳಿಸಬೇಕು. ಮನಸ್ಸಂತೂ ಬಿರುಗಾಳಿಯ ರೀತಿ ಓಡುವ ಹುಚ್ಚು ಕುದುರೆಯಾಗಿದೆ. ಬಹಳ ಸತಾಯಿಸುವ ಪ್ರಯತ್ನ ಮಾಡುತ್ತದೆ. ಬಾಬಾ ಈಗ ನಿಮ್ಮ ಬುದ್ಧಿಯ ಬೀಗವನ್ನು ತೆರೆದಿದ್ದಾರೆ. ನೀವು ಯಾವುದು ಸರಿ, ಯಾವುದು ತಪ್ಪು ಎಂದು ತಿಳಿದಿದ್ದೀರಿ. ನೀವು ತಿಳಿಸಬಹುದು - ಈಗ ಈ ಪ್ರಪಂಚವು ಬದಲಾಗುತ್ತಿದೆ. ಮಹಾಭಾರಿ ಯುದ್ಧವಂತೂ ಅವಶ್ಯವಾಗಿ ಆಗಲಿದೆ ಅದರಲ್ಲಿ ಎಲ್ಲರು ವಿನಾಶವಾಗುತ್ತಾರೆ. ಯಾದವರು ಅಣ್ವಸ್ತ್ರಗಳಿಂದ ತಮ್ಮ ಕುಲವನ್ನೆ ವಿನಾಶ ಮಾಡಿಕೊಳ್ಳುತ್ತಾರೆ. ಪಾಂಡವ ಕುಲದ ಜಯವಾಗಲಿದೆ ಆದರೆ ಪಂಚ ಪಾಂಡವರು ಉಳಿದುಕೊಂಡರು ಅವರು ಸಹ ಪರ್ವತದ ಮೇಲೆ ಹೋಗಿ ಕರಗಿ ಹೋದರೆಂದು ತೋರಿಸಿದ್ದಾರೆ ಅಂದಮೇಲೆ ನಂತರ ಏನಾಯಿತು? ಏನು ಇಲ್ಲಾ. ರಾಜಯೋಗ ಕಲಿತ್ತಿದ್ದರುಎಂದ ಮೇಲೆ ಯಾರಾದರು ಉಳಿದುಕೊಳ್ಳಬೇಕಲ್ಲವೆ. ಪ್ರಳಯವಾಗಲು ಸಾಧ್ಯವೇ! ಇವೆಲ್ಲಾ ಮಾತುಗಳನ್ನು ನೀವೀಗ ತಿಳಿದುಕೊಂಡಿದ್ದೀರಿ. ಕೃಷ್ಣನನ್ನು ಸಾಗರದಲ್ಲಿ ಆಲದ ಎಲೆಯ ಮೇಲೆ ತೇಲಿಕೊಂಡು ಬಂದನೆಂದು ತೋರಿಸುತ್ತಾರೆ. ಶ್ರೀಕೃಷ್ಣನಂತು ಗರ್ಭ ಮಹಲಿನಲ್ಲಿ ಬರುತ್ತಾನೆ. ಗರ್ಭ ಜೈಲಿನಲ್ಲಿ ದುಃಖವಾಗುತ್ತದೆ. ಸಾಗರವೆಂದರೆ ಗರ್ಭಮಹಲಾಗಿದೆ. ಬಹಳ ಆರಾಮವಾಗಿ ಕುಳಿತಿರುತ್ತಾನೆ. ಜನ್ಮ-ಜನ್ಮಾಂತರದಿಂದ ಈ ಗೀತಾಜ್ಞಾನ, ಭಾಗವತ ಇತ್ಯಾದಿಗಳನ್ನು ಕೇಳುತ್ತಾ ಬಂದಿರಿ, ಭಕ್ತಿ ಮಾರ್ಗದ ಪೆಟ್ಟು ತಿನ್ನುತ್ತಾ ಬಂದಿರಿ, ಈಗ ತಂದೆಯು ನಿಮ್ಮನ್ನು ಒಂದು ಸೆಕೆಂಡಿನಲ್ಲಿ ಸ್ವರ್ಗದ ಮಾಲೀಕರನ್ನಾಗಿ ಮಾಡುತ್ತಾರೆ. ಇದನ್ನೂ ಸಹ ಪೂರ್ವ ನಿಶ್ಚಿತವೆಂದು ಹೇಳುತ್ತಾರೆ ಅಂದಾಗ ಯಾವುದರ ಪೂರ್ವ ನಿಶ್ಚಿತ? ನಾಟಕ ಪೂರ್ವ ನಿಶ್ಚಿತವೆಂದು ಹೇಳಲಾಗುತ್ತದೆ. ಇದು ಮಾಡಿ,ಮಾಡಲ್ಪಟ್ಟರುವಂತಹ ನಾಟಕವಲ್ಲವೇ. ಮನುಷ್ಯರಂತೂ ಕೇವಲ ಪೂರ್ವ ನಿಶ್ಚಿತವೆಂದು ಹೇಳುತ್ತಿರುತ್ತಾರೆ ಆದರೆ ಏನನ್ನು ತಿಳಿದುಕೊಂಡಿಲ್ಲ. ಅಂದಾಗ ಯಾರೇ, ಬಂದರು ಮೊದಮೊದಲು ಇದನ್ನು ತಿಳಿಸಿ ಇಬ್ಬರು ತಂದೆಯರಿದ್ದಾರೆ. ಪಾರಲೌಕಿಕ ತಂದೆಯು ಸ್ವರ್ಗದ ರಚೈತನಾಗಿದ್ದಾರೆ. ಅವರಂತೂ ಸ್ವರ್ಗದ ಆಸ್ತಿಯನ್ನು ಕೊಟ್ಟಿದ್ದರು. ಇಂದಿಗೆ 5000 ವರ್ಷಗಳ ಹಿಂದೆ ಸ್ವರ್ಗವಿತ್ತು. ಈಗಂತೂ ನರಕವಾಗಿದೆ ಪುನಃ ನೀವು ಆಸ್ತಿಯನ್ನು ಪಡೆಯಬಲ್ಲಿರಿ. ನಾವು ಸಹ ಬೇಹದ್ದಿನ ತಂದೆಯಿಂದ ಆಸ್ತಿಯನ್ನು ಪಡೆಯುತ್ತಿದ್ದೇವೆ. ಈ ಭಾರತವು ಭಗವಂತನ ಜನ್ಮ ಭೂಮಿಯಾಗಿದೆ. ಹೇಗೆ ಇಬ್ರಾಹಿಂ, ಬುದ್ಧ ಮುಂತಾದವರಿಗೆ ತಮ್ಮದೇ ಆದ ಜನ್ಮ ಭೂಮಿ ಇದೆ. ನೀವು ಮಕ್ಕಳೂ ಸಹ ತಿಳಿದುಕೊಂಡಿದ್ದೀರಿ ತಂದೆಯು ಬಂದಿದ್ದಾರೆ, ಆಸ್ತಿಯನ್ನು ಕೊಡುತ್ತಿದ್ದಾರೆ. ನೀವು ಮಕ್ಕಳು ದಯಾಹೃದಯಿಗಳಾಗಬೇಕು. ಇದನ್ನು ಯಾರಿಗೆ ಬೇಕಾದರೂ ತಿಳಿಸುವುದು ಬಹಳ ಸಹಜವಾಗಿದೆ. ಪಾರಲೌಕಿಕ ತಂದೆಯ ಪರಿಚಯವನ್ನು ಕೊಡಬೇಕು. ಪಾರಲೌಕಿಕ ಫಾದರ್ ಒಂದೇಬಾರಿ ಬರುತ್ತಾರೆ. ಅವರ ನೆನಪಿನಿಂದ ನಾವು ಸ್ವರ್ಗದ ಆಸ್ತಿಯನ್ನು ಪಡೆಯುತ್ತಿದ್ದೇವೆ. ಬಹಳ ಸಹಜವಾಗಿದೆ. ಇಂತಹ ಮಾತುಗಳಾನ್ನು ಚೆನ್ನಾಗಿ ಧಾರಣೆ ಮಾಡಿ ಮತ್ತು ಅನ್ಯರಿಗೆ ತಿಳಿಸಿಕೊಡಿ, ದಾನ ಮಾಡಿ. ಪಾರಲೌಕಿಕ ತಂದೆಯು ಸ್ವರ್ಗದ ರಾಜ್ಯಭಾಗ್ಯವನ್ನು ಕೊಡುತ್ತಾರೆ. ಲಕ್ಷ್ಮಿ- ನಾರಾಯಣರಿಗೆ ಕೊಟ್ಟಿದ್ದಾರಲ್ಲವೆ. ಈ ಸೂರ್ಯವಂಶಿ ಲಕ್ಷ್ಮಿ-ನಾರಾಯಣರ ತಂದೆ ಯಾರು? ಅದನ್ನು ನಾವು ನಿಮಗೆ ತಿಳಿಸುತ್ತೇವೆ, ಸ್ವರ್ಗದ ಸ್ಥಾಪನೆ ಮಾಡುವ ಫಾದರ್ ಈಗ ಅವರಿಗೆ ಸ್ವರ್ಗದ ರಾಜ್ಯಭಾಗ್ಯವನ್ನು ಕೊಡುತ್ತಿದ್ದಾರೆ. ಬಾಕಿ ಆಶೀರ್ವಾದವನ್ನೇನು ಮಾಡುತ್ತಾರೆ? ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವಂತಹ ಮಕ್ಕಳಿಗೆ ಪ್ರೀತಿಯ ಮಾತಾ-ಪಿತ ಬಾಪ್ದಾದಾರವರ ನೆನಪು ಪ್ರೀತಿ

ಹಾಗೂ ಸುಪ್ರಭಾತ. ಆತ್ಮೀಯ ಮಕ್ಕಳಿಗೆ ಆತ್ಮೀಯ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಸರಿ ಮತ್ತು ತಪ್ಪನ್ನು ತಿಳಿದುಕೊಂಡು ಬುದ್ಧಿಬಲದಿಂದ ಬಿರುಗಾಳಿಯಂತೆ ಓಡುವಮನರೂಪಿ ಕುದುರೆಯನ್ನು ವಶಮಾಡಿಕೊಂಡು ಮಾಯಜೀತರು, ಜಗತ್ಜೀತರಾಗಬೇಕಾಗಿದೆ. ಸೋಲನ್ನನುಭವಿಸಬಾರದಾಗಿದೆ.

2. ಶಿವನನ್ನು ತಮ್ಮ ಮಗನನ್ನಾಗಿ ಮಾಡಿಕೊಂಡು ಅವರ ಪಾಲನೆಯನ್ನು ಮಾಡಬೇಕಾಗಿದೆ ಅಂದರೆ ಮೊದಲು ಅವರನ್ನು ತಮ್ಮ ವಾರಸುಧಾರರನ್ನಾಗಿ ಮಾಡಿಕೊಳ್ಳಬೇಕು. ಅವರಿಗೆ ಪೂರ್ಣ ಬಲಿಹಾರಿಯಾಗಬೇಕು.

ವರದಾನ: ಉಮಂಗ-ಉತ್ಸಾಹದ ಮುಖಾಂತರ ವಿಘ್ನಗಳನ್ನು ಸಮಾಪ್ತಿ ಮಾಡುವಂತಹ ತಂದೆ ಸಮಾನ ಸಮೀಪ ರತ್ನ ಭವ.

ಮಕ್ಕಳ ಹೃದಯದಲ್ಲಿ ಏನು ಉಮಂಗ-ಉತ್ಸಾಹ ಇದೆ ನಾನು ತಂದೆ ಸಮಾನ ಸಮೀಪ ರತ್ನ ಆಗಿ ಸುಪುತ್ರ ಮಗುವಾಗಿ ಪುರಾವೆ ಕೊಡಬೇಕು ಎನ್ನುವ ಈ ಉಮಂಗ-ಉತ್ಸಾಹ ಹಾರುವ ಕಲೆಗೆ ಆಧಾರವಾಗಿದೆ. ಈ ಉಮಂಗ ಬರುವಂತಹ ಅನೇಕ ಪ್ರಕಾರದ ವಿಘ್ನಗಳನ್ನು ಸಮಾಪ್ತಿ ಮಾಡಿ ಸಂಪನ್ನರಾಗುವಲ್ಲಿ ಸಹಯೋಗ ನೀಡುವುದು. ಈ ಉಮಂಗ-ಉತ್ಸಾಹದ ಶುದ್ಧ ಮತ್ತು ದೃಢ ಸಂಕಲ್ಪ ವಿಜಯಿಯಾಗುವಲ್ಲಿ ವಿಶೇಷ ಶಕ್ತಿಶಾಲಿ ಶಸ್ತ್ರವಾಗಿ ಬಿಡುವುದು. ಆದ್ದರಿಂದ ಹೃದಯದಲ್ಲಿ ಸದಾ ಉಮಂಗ-ಉತ್ಸಾಹವನ್ನು ಅಥವಾ ಈ ಹಾರುವ ಕಲೆಯ ಸಾಧನವನ್ನು ಖಾಯಂ ಆಗಿಟ್ಟುಕೊಳ್ಳಿ.

ಸ್ಲೋಗನ್: ಹೇಗೆ ತಪಸ್ವಿ ಸದಾ ಆಸನದ ಮೇಲೆ ಕುಳಿತಿರುತ್ತಾರೆ, ಅದೇ ರೀತಿ ತಾವು ಏಕರಸ ಅವಸ್ಥೆಯ ಆಸನದ ಮೇಲೆ ವಿರಾಜಮಾನರಾಗಿರಿ.